# ಶ್ರೀರಾಮಕೃಷ್ಣ ಅವತಾರದ ವೈಶಿಷ್ಟ್ಯ

ಸ್ವಾಮಿ ಗೌತಮಾನಂದ



**ಶ್ರೀರಾಮಕೃಷ್ಣರ ಮಹಾನ್ ಕಾರ್ಯ**

ವಿಶ್ವವಂದ್ಯ ಸ್ವಾಮಿ ವಿವೇಕಾನಂದರು ತಾವು ರಚಿಸಿರುವ ಶ್ರೀರಾಮಕೃಷ್ಣ ಸ್ತೋತ್ರದಲ್ಲಿ, ಶ್ರೀರಾಮಕೃಷ್ಣರನ್ನು 'ಅವತಾರವರಿಷ್ಠ' ಎಂದು ಕರೆದಿದ್ದಾರೆ. ಹಾಗೆಂದರೇನು? ಅವರು ಹಿಂದಿನ ಅವತಾರಗಳಾದ ರಾಮ, ಕೃಷ್ಣ, ಬುದ್ಧ, ಕ್ರಿಸ್ತ – ಮೊದಲಾದವರಿಗಿಂತ ಶ್ರೇಷ್ಠರಾದವರು ಎಂದೇ? ಅವರೆಲ್ಲರೂ ಶ್ರೀರಾಮಕೃಷ್ಣರಿಗಿಂತ ಕಡಿಮೆಯವರು ಎಂದೇ? ಈ ಪ್ರಶ್ನೆಗೆ ರಾಮಕೃಷ್ಣ ಮಹಾಸಂಘದ ಹತ್ತನೆಯ ಅಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ವೀರೇಶ್ವರಾನಂದಜಿ ಅವರು ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ಒಬ್ಬ ನಟ ಅನೇಕ ನಾಟಕಗಳಲ್ಲಿ ರಾಮ, ಕೃಷ್ಣ, ಬುದ್ಧ ಮೊದಲಾದವರ ಪಾತ್ರಗಳನ್ನು ಮಾಡಿ, ಶಭಾಸ್‌ಗಿರಿಯನ್ನು ಪಡೆದುಕೊಂಡನಂತೆ. ಕೊನೆಗೆ ಅವನು 'ಶ್ರೀರಾಮಕೃಷ್ಣ' ರ ಪಾತ್ರವನ್ನು ಅಭಿನಯಿಸಿದಾಗ, ಇದು ಮಿಕ್ಕೆಲ್ಲ ಪಾತ್ರಗಳಿಗಿಂತ ಚೆನ್ನಾಗಿತ್ತು ಎಂದು ಯಾರೋ ಪ್ರಶಂಸೆ ಮಾಡಿದರಂತೆ. ಆಗ ಅವನಿಗೆ ಕೋಪ ಬರುತ್ತದೆಯೇ? ಆ ಪ್ರಶಂಸೆಯ ಅರ್ಥ, ಹಿಂದಿನ ಪಾತ್ರಗಳೆಲ್ಲ ಚೆನ್ನಾಗಿಲ್ಲ ಎಂದೇ? ಖಂಡಿತ ಇಲ್ಲ. ಪಾತ್ರ ಮಾಡಿದವನಿಗೆ ಚೆನ್ನಾಗಿ ಗೊತ್ತು, ಹಿಂದಿನ ಎಲ್ಲ ಪಾತ್ರಗಳ ಅನುಭವ ಸೇರಿಸಿಕೊಂಡು, ಅದರ ಜೊತೆಗೆ ಮತ್ತಷ್ಟು ನವೀನತೆಯನ್ನು ಬೆರೆಸಿಕೊಂಡು, ಶ್ರೀರಾಮಕೃಷ್ಣರ ಪಾತ್ರವನ್ನು ಮಾಡಿದ್ದರಿಂದ ಅದು ಉತ್ಕೃಷ್ಟವಾಗಿ ಮೂಡಿಬಂದಿದೆ ಎಂದು. ಅದೇ ರೀತಿ ಶ್ರೀರಾಮಕೃಷ್ಣರ ಅವತಾರದ ವಿಷಯದಲ್ಲಿಯೂ. ಹಿಂದಿನ ಅವತಾರಗಳಾದ ಶ್ರೀರಾಮಚಂದ್ರನ ಸತ್ಯಸಂಧತೆ, ಶ್ರೀಕೃಷ್ಣನ ಭಕ್ತಿ-ಪ್ರೇಮ, ಬುದ್ಧನ ಕರುಣೆ, ಏಸುಕ್ರಿಸ್ತನ ಪ್ರಾರ್ಥನೆ ಮತ್ತು ಸೇವೆ – ಇವೆಲ್ಲವೂ ಶ್ರೀರಾಮಕೃಷ್ಣರ ಅವತಾರದಲ್ಲಿ ಅತ್ಯಂತ ಸೊಗಸಾಗಿ, ಪರಿಪೂರ್ಣವಾಗಿ ಮೇಳವಿಸಿ, ವ್ಯಕ್ತಗೊಂಡಿರುವುದನ್ನು ನಾವು ಕಾಣಬಹುದಾಗಿದೆ. ಅದಲ್ಲದೆ, ಶ್ರೀರಾಮಕೃಷ್ಣರ ಜೀವನದಲ್ಲಿ ಮತ್ತೂ ಅನೇಕ ವೈಶಿಷ್ಟ್ಯಗಳನ್ನು ನಾವು ಕಾಣುತ್ತೇವೆ. ಅವುಗಳೆಂದರೆ, **'ಸರ್ವಧರ್ಮ ಸಮನ್ವಯ'**, **'ಶಿವಭಾವದಿಂದ ಜೀವರ ಸೇವೆ'**, ಸಂನ್ಯಾಸಿಗಳು ಮತ್ತು ಗೃಹಸ್ಥರು ಇಬ್ಬರೂ ಮಿಳಿತಗೊಂಡ **'ರಾಮಕೃಷ್ಣ ಮಹಾಸಂಘದ ಸ್ಥಾಪನೆ'**, ಕೇವಲ ಹಿಂದೂಧರ್ಮಕ್ಕೆ ಸೀಮಿತವಾಗಿದ್ದ **'ವೇದಾಂತ ತತ್ತ್ವವನ್ನು ವಿಶ್ವಧರ್ಮವನ್ನಾಗಿಸಿದ್ದು'** – ಇಂತಹ ಅನೇಕ ಮಹಾನ್ ಕಾರ್ಯಗಳನ್ನು ಶ್ರೀರಾಮಕೃಷ್ಣರು ತಮ್ಮ ಜೀವಿತಾವಧಿಯಲ್ಲಿ ಕೈಗೊಂಡರು.

ಶ್ರೀರಾಮಕೃಷ್ಣರ ಇಡೀ ಆಧ್ಯಾತ್ಮಿಕ ಸಾಧನೆ, ಸಿದ್ಧಿ, ಬೋಧನಾ ಕಾರ್ಯ, ಮಹಾಸಮಾಧಿ – ಇವೆಲ್ಲವೂ ನಡೆದದ್ದು ಕೊಲ್ಕತಾದ ಹತ್ತಿರದ ದಕ್ಷಿಣೇಶ್ವರ ಮತ್ತು ಕೊಲ್ಕತಾದ ಕೆಲವು ಮನೆಗಳಲ್ಲಿ ಮಾತ್ರ. ಕೆಲವು ತಿಂಗಳುಗಳ ಕಾಲ ಅವರು ತೀರ್ಥಯಾತ್ರೆಗೆ ಹೋಗಿ ಬಂದರಷ್ಟೆ. ಆದರೂ ಅವರು ಮಹಾಸಮಾಧಿ ಹೊಂದಿದ ಕೇವಲ ಏಳು ವರ್ಷಗಳಲ್ಲಿ, ಅವರ ಉಪದೇಶಗಳು ಪ್ರಪಂಚದಾದ್ಯಂತ ಪ್ರಚುರಗೊಂಡವು. ಹಿಂದಿನ ಅವತಾರಗಳಾದ ಗೌತಮ ಬುದ್ಧ ಮತ್ತು ಏಸುಕ್ರಿಸ್ತರ ಸಂದೇಶಗಳು ಸಾಕಷ್ಟು ಹರಡಲು ಮುನ್ನೂರು ವರ್ಷಗಳ ಕಾಲ ಬೇಕಾಗಿತ್ತು ಎನ್ನುವುದನ್ನು ಇಲ್ಲಿ ನಾವು ನೆನಪಿಡಬೇಕು!

ಶ್ರೀರಾಮಕೃಷ್ಣರ ಅವತಾರ ಮತ್ತು ಅವರ ಮಾನವ ವ್ಯಕ್ತಿತ್ವಗಳು ಹೇಗೆ ವಿಶಿಷ್ಟವಾದುವು? ಆಧುನಿಕ ಕಾಲದ ಅವತಾರಪುರುಷರಾಗಿ ಶ್ರೀರಾಮಕೃಷ್ಣರಲ್ಲಿ ಕಾಣುವ ಸ್ವಂತಿಕೆ ಯಾವುದು? ಈ ಸ್ವಾರಸ್ಯಕರ ವಿಷಯವನ್ನು ಮುಖ್ಯವಾಗಿ ಶ್ರೀರಾಮಕೃಷ್ಣ ವಚನವೇದದ ಆಧಾರದ ಮೇಲೆ ಸರಳವಾಗಿ ನಿರೂಪಿಸಿರುವ ಪೂಜ್ಯ ಸ್ವಾಮಿ ಗೌತಮಾನಂದಜಿ ಅವರು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಟ್ರಸ್ಟಿಗಳಲ್ಲಿ ಒಬ್ಬರು ಮತ್ತು ಚೆನ್ನೈ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರು.

> ಶ್ರೀರಾಮಕೃಷ್ಣರು ತ್ಯಾಗವೇ ಮಾನವ ಜೀವನದ ಉದ್ದೇಶ ಎನ್ನುವುದನ್ನು ಈ ಆಧುನಿಕ ಯುಗದಲ್ಲಿ ಉಪದೇಶಿಸಲು ಜನ್ಮ ತಾಳಿದರು. ಅವರು ಈ ಯುಗದ ಅವತಾರ ಪುರುಷರು. ಅವರು ಪ್ರತಿಯೊಬ್ಬ ಪ್ರಾಮಾಣಿಕ ಮತ್ತು ವ್ಯಾಕುಲಚಿತ್ತದ ಸಾಧಕನಿಗೂ ಸಹಾಯ ಮಾಡುತ್ತಿದ್ದಾರೆ. ಅವರು ನಿಮಗಾಗಿ ಕಾಯುತ್ತಿದ್ದಾರೆ.
>
> – ಸ್ವಾಮಿ ಬ್ರಹ್ಮಾನಂದ

### ಶ್ರೀರಾಮಕೃಷ್ಣಾವತಾರದ ವೈಶಿಷ್ಟ್ಯಗಳು

ಪುಸ್ತಕವನ್ನೇ ಓದದೆ, ಮಹಾಪಂಡಿತರಾದ, ಈಶ್ವರಚಂದ್ರ ವಿದ್ಯಾಸಾಗರ್, ಶಶಧರ ತರ್ಕಚೂಡಾಮಣಿಯಂಥವರನ್ನೂ ಬೆರಗುಗೊಳಿಸಿದ ಪಂಡಿತೋತ್ತಮರು ಶ್ರೀರಾಮಕೃಷ್ಣರು! ಶಾಸ್ತ್ರಾಧ್ಯಯನವನ್ನೇ ಮಾಡದೆ, ವೈಷ್ಣವ ಚರಣ, ಗೌರೀ ಪಂಡಿತ, ಪದ್ಮಲೋಚನ, ನಾರಾಯಣ ಶಾಸ್ತ್ರಿ ಮುಂತಾದ ಪ್ರಕಾಂಡ ವಿದ್ವಾಂಸರನ್ನು ತಲೆತಗ್ಗಿಸುವಂತೆ ಮಾಡಿದ 'ವೇದ ಮೂರ್ತಿ'ಯೇ ಇವರು! ನರೇಂದ್ರ (ಮುಂದೆ ಸ್ವಾಮಿ ವಿವೇಕಾನಂದರು), ಡಾ. ಮಹೇಂದ್ರ ಲಾಲ್ ಸರ್ಕಾರ್ ಮೊದ ಲಾದ ವೈಜ್ಞಾನಿಕ ಮನೋಭಾವವುಳ್ಳ ವ್ಯಕ್ತಿಗಳಿಗೆ, ಆಧ್ಯಾತ್ಮಿ ಕತೆಯೂ ಒಂದು ವಿಜ್ಞಾನವೇ ಎಂದು ತೋರಿಸಿಕೊಟ್ಟ 'ಆಧುನಿಕ ವಿಜ್ಞಾನಿ' ಇವರು! ಮಥುರ ಬಾಬುವಿಗೆ ಒಂದೇ ಟೊಂಗೆಯ ಮೇಲೆ ಬೇರೆ ಬೇರೆ ಬಣ್ಣಗಳ ಹೂವುಗಳು ಬಿಟ್ಟಿರುವುದನ್ನು ತೋರಿಸಿ, ಪ್ರಕೃತಿಯ ನಿಯಮಗಳೂ ಕೂಡ ಭಗವಂತನ ಇಚ್ಛೆಯ ಮುಂದೆ ಮಣಿಯುತ್ತವೆ ಎಂದು ಸಾಧಿಸಿ ತೋರಿಸಿದ ಸಿದ್ಧಪುರುಷರು ಇವರು! ಮಹಾನ್ ಸಾಧಕರಿಗೆ ಮತ್ತು ಅವರೆಲ್ಲರ ಸಾಧನೆಗಳಿಗೆ ಚೈತನ್ಯವನ್ನು ತುಂಬಿ, ಅವರ ಜೀವನ ಸಫಲವಾಗುವಂತೆ ಮಾಡಿದ 'ಆಧ್ಯಾತ್ಮಿಕ ಸಾಮ್ರಾಟರು' ಶ್ರೀರಾಮಕೃಷ್ಣರು! ಹೀಗೆ ಶ್ರೀರಾಮ ಕೃಷ್ಣರ ವೈಶಿಷ್ಟ್ಯತೆಗಳು ಅವರ ವ್ಯಕ್ತಿತ್ವದಷ್ಟೇ ಅನಂತವಾದುವು.

ಶ್ರೀರಾಮಕೃಷ್ಣರು ತಮ್ಮ ಭಾವಸಮಾಧಿಯ ಛಾಯಾ ಚಿತ್ರವನ್ನು ತೆಗೆಯಲು ಅವಕಾಶ ಮಾಡಿಕೊಟ್ಟರು, ಅವರ ಮಾತುಗಳನ್ನು ಬರೆದುಕೊಳ್ಳಲು ಕೂಡ ಅನುವು ಮಾಡಿಕೊಟ್ಟರು. ಅದಲ್ಲದೆ, ತಮ್ಮ ಭಾವಾವಸ್ಥೆಗಳನ್ನು ವೈಜ್ಞಾನಿಕವಾಗಿ ಪರೀಕ್ಷಿಸಲು ಅನುಮತಿ ಕೊಟ್ಟರು. ಇವೆಲ್ಲವೂ ವಿಶ್ವತೋವಿಶಾಲವಾದ ಅವರ ಉದಾರಹೃದಯದ ಪರಿಚಯವನ್ನು ನಮಗೆ ಮಾಡಿ ಕೊಡುತ್ತವೆ.

ಭಾಗವತದಲ್ಲಿ ಈ ಮಾತು ಬರುತ್ತದೆ:

**ಆತ್ಮಾರಾಮಾಶ್ಚ ಮುನಯಃ ನಿರ್ಗ್ರಂಥಾಽಪಿ ಉರುಕ್ರಮೇ।**
**ಕುರ್ವಂತ್ಯಹೈತುಕೀಂ ಭಕ್ತಿಂ ಇತ್ಥಂ ಭೂತಗುಣೋ ಹರಿಃ ॥**

"ಭಗವಂತನ ಭಕ್ತರು ತಮ್ಮ ಸುಖಕ್ಕಾಗಿ ಯಾವ ಬಾಹ್ಯ ವಸ್ತುಗಳನ್ನೂ ಅವಲಂಬಿಸುವುದಿಲ್ಲ. ಅವರು ಆತ್ಮಾರಾಮರು. ಆದ್ದರಿಂದಲೇ ಪ್ರಾಪಂಚಿಕವಾದ ಯಾವ ಬಂಧನಗಳೂ ಅವರನ್ನು ಬಾಧಿಸು ವುದಿಲ್ಲ. ಅವರು ಭಗವಂತನಲ್ಲಿ ಯಾವ ಅಪೇಕ್ಷೆಯೂ ಇಲ್ಲದೆಯೇ, ನಿರ್ವ್ಯಾಜವಾದ ಭಕ್ತಿಯನ್ನು ಮಾಡುತ್ತಾರೆ. ಶ್ರೀಹರಿಯು ಅಂತಹ ಅತಿಶಯ ಗುಣಗಳನ್ನು ಉಳ್ಳವನು."

ಮೇಲಿನ ಲಕ್ಷಣಗಳು ಶ್ರೀಹರಿಯ ಅವತಾರವಾದ ಶ್ರೀರಾಮ ಕೃಷ್ಣರಿಗೂ ಚೆನ್ನಾಗಿ ಒಪ್ಪುತ್ತವೆ ಎಂದೇ ಹೇಳಬೇಕು. ಅವರು ಹಲವಾರು ಆಧ್ಯಾತ್ಮಿಕ ದಿಗ್ಗಜಗಳನ್ನು ತಮ್ಮಲ್ಲಿಗೆ ಆಕರ್ಷಿಸಿ ದರು. ಅವರ ಮಧ್ಯೆ ಇದ್ದುಕೊಂಡು, ಅಪೂರ್ವವಾದ ಲೀಲೆಗಳನ್ನು ತೋರಿದರು. ಅವರ ಸಂಗಾತಿಯಾದ ಶ್ರೀಮಾತೆ ಶಾರದಾದೇವಿಯವರು ಸ್ವತಃ ಶಕ್ತಿಸ್ವರೂಪಿಣಿಯೇ ಆಗಿದ್ದಾರೆ. ನರೇಂದ್ರನಾದರೋ ನರನಾರಾಯಣ ಸ್ವರೂಪಿ; ರಾಖಾಲ ಶ್ರೀಕೃಷ್ಣನ ನಿತ್ಯಸ್ನೇಹಿತ; ನಿರಂಜನ ಶ್ರೀರಾಮನ ಅಂಶ; ಯೋಗೀಂದ್ರ ಅರ್ಜುನನ ಅಂಶ; ಬಾಬುರಾಂ ರಾಧೆಯ ಅಂಶ; ಶರತ್ ಮತ್ತು ಶಶಿ ಏಸುಕ್ರಿಸ್ತನ ಸಹಚರರು! ಹೀಗೆ ಶ್ರೀರಾಮಕೃಷ್ಣರ ಅನುಯಾಯಿಗಳೆಲ್ಲರೂ ಮಹಾವಿಭೂತಿಗಳೇ ಆಗಿದ್ದಾರೆ.

ಶ್ರೀರಾಮಕೃಷ್ಣರ ಜೀವನಸಂದೇಶಗಳಲ್ಲಿ ಹತ್ತು ಹಲವು ವೈಶಿಷ್ಟ್ಯತೆಗಳು ಮೈಗೂಡಿರುವುದನ್ನು ಕಾಣುತ್ತೇವೆ. ಸರ್ವ ಧರ್ಮ ಸಮನ್ವಯ, ಮಾನವನ ದಿವ್ಯತೆ, ಭಗವತ್ಸಾಕ್ಷಾತ್ಕಾರವೇ ಜೀವನದ ಧ್ಯೇಯವೆಂಬ ಪರಿಜ್ಞಾನ, ಮಾನವನಲ್ಲಿ ಮಹೇಶ್ವರನ ಸೇವೆ – ಇವೆಲ್ಲ ಆಧುನಿಕ ಯುಗದ ಅತ್ಯಂತ ಕ್ರಾಂತಿಕಾರಕ ವಿಷಯಗಳು. ಅವುಗಳನ್ನು ತಾವು ಸ್ವತಃ ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದುಕೊಂಡು, ತಮ್ಮ ಶಿಷ್ಯರ ಮೂಲಕ ಇಡೀ ಪ್ರಪಂಚಕ್ಕೆ ಬೋಧಿಸಿರುವುದೇ ಶ್ರೀರಾಮಕೃಷ್ಣರು ನಮಗೆ ನೀಡಿರುವ ಅತ್ಯಂತ ಅಮೂಲ್ಯ ಕೊಡುಗೆ ಎನ್ನಬಹುದು.

### ವಚನವೇದದ ದೃಷ್ಟಾಂತಗಳು

ಶ್ರೀರಾಮಕೃಷ್ಣರೇ ತಮ್ಮ ವ್ಯಕ್ತಿತ್ವದ ವೈಶಿಷ್ಟ್ಯತೆಗಳನ್ನು ಹಲ ವಾರು ಬಾರಿ ತಮ್ಮ ಭಕ್ತರಿಗೆ ತಿಳಿಸಿ ಹೇಳಿರುವುದನ್ನು ನಾವು ಕಾಣುತ್ತೇವೆ. ಅವುಗಳಲ್ಲಿ ಕೆಲವು ಪ್ರಸಂಗಗಳನ್ನು ಅಧ್ಯಯನ ಮಾಡಿದಾಗ ಶ್ರೀರಾಮಕೃಷ್ಣರ ಅನನ್ಯತೆ ನಮಗೆ ಚೆನ್ನಾಗಿ ವೇದ್ಯವಾಗುತ್ತದೆ.

೧.ಒಂದು ಪ್ರಸಂಗ ಶ್ರೀರಾಮಕೃಷ್ಣ ವಚನವೇದದಲ್ಲಿ ಹೀಗೆ ದಾಖಲಾಗಿದೆ. ಭಕ್ತ ಮಣಿಮಲ್ಲಿಕ ಶ್ರೀರಾಮಕೃಷ್ಣರಿಗೆ ಹೇಳು ತ್ತಾನೆ: "ಪರಮಾತ್ಮ ಹೇಗೆ ಅನಂತನೋ ಹಾಗೆಯೇ ನೀವೂ ಕೂಡ." ಅದಕ್ಕೆ ಶ್ರೀರಾಮಕೃಷ್ಣರು ಹೇಳುತ್ತಾರೆ, "ನೀನು ಕಂಡು ಹಿಡಿದುಬಿಟ್ಟೆ.... ನಾನು ಹಿಂದೂ, ಮುಸ್ಲಿಂ, ಕ್ರೈಸ್ತ, ಶಾಕ್ತ, ವೈಷ್ಣವ, ವೇದಾಂತ – ಈ ಎಲ್ಲಾ ಧರ್ಮಗಳ ಸಾಧನೆಗಳನ್ನು ಮಾಡಬೇಕಾಯಿತು. ಕೊನೆಗೆ ನಾನು ಕಂಡುಕೊಂಡೆ, 'ಎಲ್ಲದ ರಲ್ಲೂ ಒಬ್ಬನೇ ಪರಮಾತ್ಮನಿದ್ದಾನೆ. ಅವನನ್ನೇ ಬೇರೆ ಬೇರೆ

> **ಶ್ರೀರಾಮಕೃಷ್ಣ ಪರಮಹಂಸರು ಬರಿಯ ಸಿದ್ಧಾಂತ ಲೋಲುಪರಲ್ಲ; ಪ್ರಯೋಗಪ್ರವೀಣರು. ಸತ್ಯಪರೀಕ್ಷೆಗೆ ಸಾಕ್ಷಾತ್ಕರಣವೇ ಪರಮಪ್ರಮಾಣ. ಅವರಿವರ ಮಾತು ಗಳಿಗಿಂತಲೂ, ಧರ್ಮಗ್ರಂಥಗಳ ವಾಕ್ಯಗಳಿಗಿಂತಲೂ ಸ್ವಾನುಭವ ಅತ್ಯುತ್ತಮ ಸಾಕ್ಷಿ... ಆದ್ದರಿಂದಲೇ ಅವರು ಸರ್ವಮತ ಸಿದ್ಧಾಂತಗಳನ್ನೂ ಸಾಧನೆಯ ಶಾಲೆಯಲ್ಲಿ ಅಸಮಸಾಹಸದಿಂದಲೂ ವಿಶಾಲ ಹೃದಯದಿಂದಲೂ ಪರೀಕ್ಷಿಸಿ ಸಮನ್ವಯತತ್ತ್ವಸಿದ್ಧರಾದರು. – ಕುವೆಂಪು**

ದಾರಿಗಳಿಂದ ಜನರು ಅರಸುತ್ತಿದ್ದಾರೆ."

ಹೀಗೆ ಶ್ರೀರಾಮಕೃಷ್ಣರು ವಿವಿಧ ಪಂಥಗಳು, ಯೋಗಗಳು, ದರ್ಶನಗಳನ್ನು ತಮ್ಮ ವ್ಯಕ್ತಿತ್ವದಲ್ಲಿ ಮೈಗೂಡಿಸಿಕೊಂಡು, ಆಧ್ಯಾತ್ಮಿಕ ಸಾಧನೆಯನ್ನು ಮಾಡಿದರು. ಅವುಗಳೆಲ್ಲದರಲ್ಲಿ ಸಮನ್ವಯವನ್ನು ಕಂಡುಕೊಂಡರು. ಹೀಗಾಗಿಯೇ ವಿಶ್ವದ ಎಲ್ಲ ಪ್ರಾಮಾಣಿಕ ಸಾಧಕರಿಗೆ ಅವರು ಅತ್ಯಂತ ಪ್ರಿಯರಾಗಿದ್ದಾರೆ, ಆದರ್ಶಪುರುಷರೂ ಆಗಿದ್ದಾರೆ.

೨. ಶ್ರೀರಾಮಕೃಷ್ಣರಲ್ಲಿ ಅದೆಂಥ ಆಧ್ಯಾತ್ಮಿಕ ಶಕ್ತಿ ತುಂಬಿತ್ತು! ವಚನವೇದದಲ್ಲಿ ಉಲ್ಲೇಖವಾಗಿರುವ ದಿನಾಂಕ ೨೫.೦೬. ೧೮೮೩ ರಲ್ಲಿ ನಡೆದ ಮಾತುಕತೆಯು ಅದನ್ನು ಸ್ಪಷ್ಟಪಡಿಸುತ್ತದೆ.

ಮಾಸ್ಟರ್ ಮಹಾಶಯನಿಗೆ ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ: "ನೋಡು, ಇಲ್ಲಿಗೆ (ನನ್ನ ಬಳಿ) ಯಾರು ಯಾರು ಬರುತ್ತಾರೋ, ಅವರೆಲ್ಲರ ಸಂಶಯಗಳೂ ನಾಶವಾಗಿ ಹೋಗುತ್ತವೆ."

ಶಾಸ್ತ್ರಗಳೂ ಇದನ್ನೇ ಹೇಳುತ್ತವೆ. ಮುಂಡಕೋಪನಿಷತ್ತು, **'ಛಿದ್ಯಂತೇ ಸರ್ವಸಂಶಯಾಃ'** – ಆತ್ಮ ಸಾಕ್ಷಾತ್ಕಾರವನ್ನು ಪಡೆದ ವ್ಯಕ್ತಿಯ ಎಲ್ಲ ಸಂಶಯಗಳೂ ನಾಶವಾಗುತ್ತವೆ ಎನ್ನುತ್ತದೆ. ಅಜ್ಞಾನ ಸಂಪೂರ್ಣವಾಗಿ ತೊಲಗಿ, ಆತ್ಮ–ಪರಮಾತ್ಮರ ಬಗ್ಗೆ ಸರಿಯಾದ ಜ್ಞಾನ ಉಂಟಾದಾಗಲೇ ಎಲ್ಲ ಸಂಶಯಗಳೂ ನಿವಾರಣೆಯಾಗುವುದು. ಪರಮಾತ್ಮನನ್ನು ಬಿಟ್ಟು ಬೇರೆ ಯಾರೂ ಕರ್ಮಗಳ ಬಂಧನವನ್ನು ಬಿಡಿಸಿ, ಅಜ್ಞಾನ ಅಥವಾ ಸಂಶಯವನ್ನು ಹೋಗಲಾಡಿಸಲಾರರು ಎಂದು ಭಾಗವತ ಹೇಳುತ್ತದೆ.

ಎಲ್ಲರ ಸಂಶಯಗಳನ್ನು ನಿವಾರಣೆ ಮಾಡುವ ಶಕ್ತಿ ತಮಗೆ ಇದೆ ಎಂದು ಶ್ರೀರಾಮಕೃಷ್ಣರು ಹೇಳಿಕೊಂಡಿದ್ದರಿಂದ, ಅವರು ಅವತಾರಪುರುಷರು ಎಂದು ತಾವೇ ಪರೋಕ್ಷವಾಗಿ ಘೋಷಿಸಿದಂತಾಯಿತು, ಅಲ್ಲವೇ? ಅದಲ್ಲದೆ ಶ್ರೀರಾಮಕೃಷ್ಣರೇ ಹಲವು ಕಡೆ, "ಅವತಾರಪುರುಷರು ನಿಜವಾದ ಭಕ್ತಿಯನ್ನು ತೋರಿಸಿಕೊಡಲು ಬರುತ್ತಾರೆ" ಎಂದು ಹೇಳುತ್ತಿದ್ದರು. ಇದರಿಂದಲೂ ಶ್ರೀರಾಮಕೃಷ್ಣರು ಅವತಾರಪುರುಷರು ಎನ್ನುವುದು ಸಿದ್ಧವಾಗುತ್ತದೆ.

೩. ೧೯.೮.೧೮೮೩ ರಂದು ಅಧರ್ ಸೇನ್ ಎನ್ನುವ ಭಕ್ತನ ಮನೆಯಲ್ಲಿ ಸಂಕೀರ್ತನವಾಗುತ್ತಿದೆ. ಶ್ರೀರಾಮಕೃಷ್ಣರು ನೃತ್ಯ ಮಾಡುತ್ತ ಭಾವಾವಿಷ್ಟರಾಗಿದ್ದಾರೆ. ಅವರು ರಾಖಾಲ್‌ಗೆ ಹೇಳುತ್ತಿದ್ದಾರೆ, "ನೋಡು, ಇಲ್ಲಿನ ಮಳೆ ಶ್ರಾವಣಮಾಸದ ಮಳೆಯಂತೆ, ಸ್ವಲ್ಪ ಹುಯ್ದು ನಿಂತು ಹೋಗುವ ಮಳೆಯಲ್ಲ. ಇದು ಮನುಷ್ಯ ಮಾಡಿದ ಶಿವಲಿಂಗವಲ್ಲ, ಭೂಮಿಯನ್ನು ಭೇದಿಸಿಕೊಂಡು ಎದ್ದ ಸ್ವಯಂಭುಲಿಂಗ!"

ಇದರ ಅರ್ಥ, ಶ್ರೀರಾಮಕೃಷ್ಣರಲ್ಲಿ ಪ್ರಕಟವಾಗಿರುವ ಭಾವ, ಭಕ್ತಿ, ಪರವಶತೆಗಳ ಪ್ರವಾಹವು ಸ್ವಲ್ಪ ಕಾಲ ಇದ್ದು ಹೋಗುವಂಥದಲ್ಲ. ಅದು ನೂರಾರು ವರ್ಷಗಳ ಕಾಲ ಎಲ್ಲರಿಗೂ ಪ್ರೇರಣೆ ಕೊಡುವ ಭಕ್ತಿ–ಭಾವಗಳ ಸ್ರೋತವಾಗಿದೆ ಎಂದು. ಇದರಿಂದ, ಶ್ರೀರಾಮಕೃಷ್ಣರ ಜೀವನಸಂದೇಶಗಳು ಸಾರ್ವಕಾಲಿಕವಾದ ಮಹತ್ವ ಪಡೆದವುಗಳು ಎಂದು ಗೊತ್ತಾಗುತ್ತದೆ.

೪. ಶ್ರೀರಾಮಕೃಷ್ಣರು ಎಲ್ಲೆಲ್ಲಿಯೂ ಭಗವಂತನ ದರ್ಶನವನ್ನು ಮಾಡುತ್ತಿದ್ದರು. ೨೦.೮.೧೮೮೩ ರಂದು ಮಾಸ್ಟರ್ ಮಹಾಶಯನೊಡನೆ ನಡೆಸಿದ ಸಂಭಾಷಣೆಯಲ್ಲಿ ಅವರು ಹೇಳುತ್ತಾರೆ: "ಸೊಳ್ಳೆಪರದೆಯೊಳಗೆ ಕುಳಿತು ಧ್ಯಾನ ಮಾಡುತ್ತಿದ್ದೆ. ಭಾವನೆ ಬಂತು, ಧ್ಯಾನ ಎಂಬುದು ಇನ್ನು ಬೇರೆ ಏನೂ ಅಲ್ಲ, ಯಾವುದಾದರೂ ಒಂದು ರೂಪವನ್ನು ಕಲ್ಪಿಸಿಕೊಂಡು ಅದರ ಮೇಲೆ ಚಿಂತನೆ ಮಾಡುವುದು ಎಂಬುದಾಗಿ. ಆದ್ದರಿಂದ ಇದು ನನಗೆ ರುಚಿಸಲಿಲ್ಲ. ಭಗವಂತ ಇದ್ದಕ್ಕಿದ್ದ ಹಾಗೆ ತನ್ನ ದರ್ಶನ ಕೊಟ್ಟುಬಿಟ್ಟಿದ್ದೇ ಆದರೆ, ಆಗ ತೃಪ್ತಿ. ಮತ್ತೆ ನನಗೆ ನಾನೇ ಹೇಳಿಕೊಂಡೆ: "ಧ್ಯಾನ ಮಾಡುತ್ತಾನಲ್ಲ, ಆತ ಯಾರು? ಯಾರ ಮೇಲೆ ತಾನೆ ಧ್ಯಾನ ಮಾಡುವುದು?"

ಮುಂದುವರಿದು ಅವರು ಹೇಳುತ್ತಾರೆ, "ಭಗವಂತ ಧ್ಯಾನ ಮಾಡಿಸದಿದ್ದರೆ, ಧ್ಯಾನ ಮಾಡಲಾಗುವುದಿಲ್ಲ. ಆತ ಮಾಡಿಸಿದಾಗ ಮಾತ್ರ ಸಾಧ್ಯವಾಗುತ್ತದೆ..." ಆಗ ಮಾಸ್ಟರ್ ಮಹಾಶಯ ಹೇಳುತ್ತಾನೆ, " ಹೌದು, ನಿಮ್ಮಲ್ಲಿ 'ಅಹಂ' ಎಂಬುದು ಇಲ್ಲವೇ ಇಲ್ಲ. ಆದ್ದರಿಂದ ನಿಮಗೆ ಹಾಗೆ ಅನ್ನಿಸುತ್ತದೆ. ಯಾರಲ್ಲಿ 'ಅಹಂ' ಎಂಬುದು ಇಲ್ಲವೇ ಇಲ್ಲವೋ ಆತನಿಗೆ ಹೀಗೇ ಅನ್ನಿಸುತ್ತದೆ." ಶ್ರೀರಾಮಕೃಷ್ಣರೆನ್ನುತ್ತಾರೆ, "ಹೌದು."

'ನಾನು' ಎಂಬುದು ಅಳಿಯುವ ಸ್ಥಿತಿ ಕೇವಲ ಅವತಾರ ಪುರುಷರಿಗೆ ಮಾತ್ರ ಸಾಧ್ಯವಾಗುವಂತಹ ಪರಮೋಚ್ಚ ಸ್ಥಿತಿ. ಇಂತಹ ಸ್ಥಿತಿಯನ್ನು ಶ್ರೀರಾಮಕೃಷ್ಣರು ಪಡೆದಿದ್ದರು ಎನ್ನುವುದು ಮೇಲಿನ ಮಾತುಕತೆಯಿಂದ ತಿಳಿದುಬರುತ್ತದೆ.

(ಮುಂದುವರಿಯುವುದು)